# ದುಂಡು ಮಲ್ಲಿಗೆ ಹಾಡು

ಸಂಜೆದೋಳಿನಲ್ಲಿ ಬಿರಿದ
ಸೊಗಸಾದ ಮಲ್ಲಿಗೆಯೆ
ಮುದ್ದಾದ ನಿನ್ನ ತೋಯಿಸಿದ್ದು
ಪ್ರೇಮದಿಬ್ಬನಿಯೆ

ಅಚ್ಚ ಬಿಳುಪಿನ ನಿನ್ನ ಸವಿ
ಇಚ್ಛೆ ಏನಿದೆಯೊ
ದುಂಬಿ ಬಾರದೆ ದುಂಡು
ಮೊಗದ ಕಳೆ ಇಳಿದಿದೆಯೊ




ನೀ ಅರಳಿ ಸೊಂಪಾಗಿ ಬಳ್ಳಿ
ತಾ ನಾಚಿತು
ಮರ ತಬ್ಬಿ ತೆನೆ ತೂಗಿ
ಪುಳಕದಲಿ ಮೈ ಮರೆಯಿತು

ಮಕರಂದವೆ ಮೈ ತಳೆದು
ಸೊಗಸೆಲ್ಲವನು ಸುರಿದೀತು
ಜೇನ ಹೀರಿದ ತುಟಿಯು
ಮತ್ತೇರಿ ಮಿಂದಿತು

ಬಂಧನವು ಬಿಗಿಯಾಗಿ
ಮೈಯೆಲ್ಲ ಘಮದ ಕಂಪು
ಕೆನ್ನೆ ತುಂಬಾ ಸಿಹಿ ಮುತ್ತು
ಕಿವಿಗಳಲಿ ಪ್ರೇಮರಾಗದ ಇಂಪು

ಎದೆ ರಂಗು ಎರಚಾಡಿ
ಪಕಳೆಯೆಲ್ಲವು ಕೆಂಪು
ತನು ಮನವು ಹಗುರಾಗಿ
ಭಾವ ಬಿಸಿಯೇರಿಯೂ ತಂಪು

● **ಮಮತಾ ಅರಸೀಕೆರೆ**